# ಕೋಪವೆಂಬ ದಾವಾನಲ

ಸರಿಯಾಗಿ ಎಂಬತ್ತೆರಡು ವರ್ಷಗಳ ಹಿಂದೆ, ಮಾರ್ಚ್ 22, 1933 ರಂದು ಜರ್ಮನಿಯ ಮ್ಯುನಿಚ್ ನಗರದ ಬಳಿ ಅಧಿಕೃತವಾಗಿ ಮೊಟ್ಟಮೊದಲ ಕಾನ್ಸೆಂಟ್ರೇಷನ್ ಕ್ಯಾಂಪ್ ಪ್ರಾರಂಭವಾಯಿತು. ಸೆರೆಯಾಳುಗಳನ್ನು ಟ್ರಕ್ಕುಗಳಲ್ಲಿ ತಂದಿಳಿಸುತ್ತಿದ್ದರು. ಕ್ಯಾಂಪಿನ ಕಮಾಂಡೆಂಟ್ ಹಿಲ್ಮರ್ ವಾಕರ್ಲೆ ಎಂಬ ಯುವ ಅಧಿಕಾರಿ ಇಳಿಯುತ್ತಿದ್ದ ಸೆರೆಯಾಳುಗಳನ್ನು ಮುಖನೋಡಿ ಜ್ಯೂಗಳು ಮತ್ತು ಕಮ್ಯುನಿಷ್ಟರು ಯಾರೆಂದು ಗುರುತಿಸಿ ಬೇರ್ಪಡಿಸಿ ನಿಲ್ಲಿಸುತ್ತಿದ್ದ. ಸೈನ್ಯದ ಕೇಂದ್ರೀಕೃತ ಶಿಬಿರ (ಕಾನ್ಸೆಂಟ್ರೇಷನ್ ಕ್ಯಾಂಪ್) ಗಳೆಂದರೆ ಯಾವುದೇ ವಿಚಾರಣೆಯಿಲ್ಲದೆ, ಪೋಲೀಸು ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ಮೀರಿ ಶಿಕ್ಷೆಗೊಳಪಡಿಸುವ ಸ್ಥಳ. ಅವರು ಅಪರಾಧಿಗಳಾಗಿರಲಿಲ್ಲ, ಕೇವಲ ನಾಝಿ ಧೋರಣೆಯ ವಿರೋಧಿಗಳಾಗಿದ್ದರು. ಅಲ್ಲಿಂದ ಶುರುವಾಗುತ್ತಿತ್ತು ಬರ್ಬರ ಕ್ರೌರ್ಯ. ಆ ಮೃಗೀಯ ಹಿಂಸೆಗೆ ದೇಹ ತತ್ತರಿಸಿ ಕುಸಿದು ಬೀಳುವಾಗ ಬುರುಡೆಯ ಹಿಂಭಾಗಕ್ಕೆ ರಿವಾಲ್ವಾರ್ ಇಡುತ್ತಿದ್ದರು. ಹೆಣಗಳಾದ ಮೇಲೆ ಅವರ ಹೆಸರುಗಳು 'ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಪೋಲೀಸರ ಗುಂಡಿಗೆ ಬಲಿ'ಯಾದವರ ಪಟ್ಟಿಯಲ್ಲಿ ಸೇರುತ್ತಿತ್ತು.

ಇದು ಜಗತ್ತಿನ ಇತಿಹಾಸದಲ್ಲಿ ದಾಖಲಾಗಿರುವ ಜನಾಂಗೀಯ ದ್ವೇಷದ ಅತ್ಯಂತ ಕೆಟ್ಟ ಉದಾಹರಣೆ. ತನ್ನಂತೆಯೆ ಇರುವ ಮನುಷ್ಯನನ್ನು ಅನ್ಯ ಜನಾಂಗಕ್ಕೆ ಸೇರಿದವನೆಂಬ ಒಂದೇ ಕಾರಣಕ್ಕೆ ದ್ವೇಷಿಸುವುದು ಅದರ ಲಕ್ಷಣ. ಜಾತಿ ಪದ್ಧತಿ ಇನ್ನೂ ಒಂದು ಹೆಜ್ಜೆ ಮುಂದೆ. ಅದರ ಲಕ್ಷಣವೆಂದರೆ ದ್ವೇಷ+ ಅವಮಾನ= ತಿರಸ್ಕಾರ! ಅಸ್ಪೃಶ್ಯತೆ ಮತ್ತಷ್ಟು ವ್ಯಗ್ರರೂಪದ್ದು; ದ್ವೇಷ+ ಅವಮಾನ+ ಮೈಲಿಗೆ= ಬಹಿಷ್ಕಾರ! ಅವರೋಹಣಗತಿಯಲ್ಲಿ ನಡೆಯುವ ಈ ಕಿರುಕುಳ ಕೆಲವೊಮ್ಮೆ ಮಾರಣಹೋಮದಲ್ಲಿ ಪರ್ಯಾವಸನಗೊಳ್ಳುತ್ತದೆ.

ಇದೇ ಮಾರ್ಚ್ 19 ರಂದು ಚಾಮರಾಜನಗರ ಜಿಲ್ಲೆಯ ಸಂತೇಮರಳ್ಳಿ ಪಟ್ಟಣದ ಬಾಳೆತೋಟದಲ್ಲಿ ಕೃಷ್ಣಯ್ಯ ಮತ್ತು ನಂಜಯ್ಯ ಎಂಬ ಇಬ್ಬರು ದಲಿತ ಕೂಲಿಯಾಳುಗಳನ್ನು ಮಾಲಿಕ ನಾಗರಾಜನ ತಮ್ಮನಾದ ಮಹದೇವ ಕುಡುಗೋಲಿನಿಂದ ಕೊಚ್ಚಿ ಕೊಲೆ ಮಾಡಿದ. ಕಾರಣ ಇಷ್ಟೆ, ಆ ಆಳುಗಳು ಮಹದೇವ ಹೇಳಿದ ಕೆಲಸವನ್ನು ಮಾಡಲು ನಿರಾಕರಿಸಿದರು. ಯಾಕೆಂದರೆ ಅವರಿಗೆ ಕೆಲಸ ಹೇಳಬೇಕಾಗಿದ್ದವನು ನಾಗರಾಜ. ಅವರ ಪ್ರಕಾರ ಆತ ಒಡೆಯ. ತಾರ್ಕಿಕವಾಗಿ ಆಳುಗಳ ನಿಲುವು ಸರಿಯಿರಬಹುದು. ಆದರೆ ಮಹದೇವ ತನ್ನ ಮಾತು ಕೇಳದ ಕೂಲಿಕಾರ್ಮಿಕರ ದಾರ್ಷ್ಟ್ಯವನ್ನು ಸಹಿಸಲಾರದವನಾದ. ಅದು ಅವನ ಅಹಮಿನ ಮೇಲೆ ಬಿದ್ದ ದೊಡ್ಡ ಪೆಟ್ಟಾಗಿತ್ತು. ಧಣಿಯ ತಮ್ಮನಾದ ಅವನಿಗೆ ಸ್ವಪ್ರತಿಷ್ಠೆ ಕೆಣಕಿತು. ದ್ವೇಷ ಹೊತ್ತಿಕೊಂಡಿತು. ಕೋಪಾಗ್ನಿಯಲ್ಲಿ ಬೆಂದು ಹುಚ್ಚನಾದ.

ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕೋಪ, ದ್ವೇಷಗಳಿಗೆ ಕಾರಣವಿರಬೇಕೆಂದೇನಿಲ್ಲ. ಧಣಿ ಮತ್ತು ಆಳು ಇಬ್ಬರಿಗೂ ಪೂರ್ವನಿರ್ಧಾರಿತ ಸ್ಥಾನಮಾನಗಳಿವೆ. ಗ್ರಾಮೀಣ ಭಾಗದಲ್ಲಿ ಇಂದಿಗೂ ಈ ವ್ಯವಸ್ಥೆ ಚೂರೂ ಕೊಂಕದಂತೆ ನಡೆದುಕೊಂಡು ಬರುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆ. ಏಣಿಯ ಕೆಳಗಿರುವವನಿಗೆ ಮೆಟ್ಟಿಲೇರುವ ಕಾತರ. ಮೇಲಿರುವವನು ಮೆಟ್ಟಿಲಿನಿಂದ ಕೆಳಗಿಳಿಯುವುದು ದುಸ್ತರ. ಆಳಾದವನಿಗೆ ಪಡೆದುಕೊಳ್ಳುವ ಬಯಕೆ, ಧಣಿಯಾದವನಿಗೆ ಕಳೆದುಕೊಳ್ಳುವ ಸಂಕಟ ಇದ್ದೇ ಇರುತ್ತದೆ.

ಕೋಪವು ವಿವೇಕವನ್ನು ಕುರುಡಾಗಿಸುತ್ತದೆ. ಕೋಪೋದ್ರಿಕ್ತನಾದವನು ಉದ್ವೇಗವನ್ನು ಒಂದರೆಗಳಿಗೆ ತಾಳಿದರೆ ಆ ಕ್ಷಣದ ನಿರ್ಧಾರ ಬದಲಾಗುತ್ತದೆ, ಪರಿಣಾಮವೂ ಬದಲಾಗುತ್ತದೆ.

ನೊಬೆಲ್ ಶಾಂತಿ ಬಹುಮಾನ ಪುರಸ್ಕೃತ ಕೈಲಾಸ್ ಸತ್ಯಾರ್ಥಿ ತಮ್ಮ ಇತ್ತೀಚಿನ ಭಾಷಣದಲ್ಲಿ 'ನನ್ನಲ್ಲಿ ಉಂಟಾದ ಅತ್ಯುತ್ತಮ ಆಲೋಚನೆಗಳು, ಯೋಜನೆಗಳು ನಾನು ಕೋಪಗೊಂಡಾಗಲೇ ಉದ್ಭವವಾದಂತಹವು' ಎಂದು ಹೇಳಿಕೊಂಡಿದ್ದಾರೆ. ಕೋಪ ಎಲ್ಲರಿಗೂ ಬರುತ್ತದೆ ನಿಜ. ಅದನ್ನು ಹೇಗೆ ನಿಗ್ರಹಿಸಿ ಸಕಾರಾತ್ಮವಾಗಿ ಬಳಕೆ ಮಾಡುವುದು ಎಲ್ಲರಿಂದಲೂ ಸಾಧ್ಯವಾಗುವುದಿಲ್ಲ. ತಾಳ್ಮೆಯನ್ನು ಕಲಿತವರು ಮಾತ್ರ ಕೋಪ ಬಂದಾಗ ಒಂದು ಕ್ಷಣ ನಿಂತು ಕೋಪವನ್ನು ದಿಟ್ಟಿಸುತ್ತಾರೆ, ಅದಕ್ಕೆ ಕಾರಣವನ್ನು ಹುಡುಕುತ್ತಾರೆ, ಅಷ್ಟು ಹೊತ್ತಿಗೆ ಕೋಪ ಅರ್ಧ ಶಮನವಾಗಿರುತ್ತದೆ. ಕೋಪವನ್ನು ಸೃಜಿಸುವ ನೇತ್ಯಾತ್ಮಕ ಶಕ್ತಿಯನ್ನು ಕ್ಷಣ ನಿಂತು ನೋಡಿ ಕಾರಣ ಹುಡುಕುವಾಗ ಹೊಸ ಹೊಳಹುಗಳ ಸಂಪರ್ಕದಿಂದ ಅದು ಇತ್ಯಾತ್ಮಕ ಶಕ್ತಿಯಾಗಿ ಬದಲಾಗಿಬಿಡುತ್ತದೆ. ಸತ್ಯಾರ್ಥಿಯವರಿಗೆ ಆದದ್ದು ಹೀಗೆಯೆ.

ಬುದ್ಧನು ಹೇಳಿದ 'ಕೋಪ ತಿನ್ನುವ ಯಕ್ಷ' ಎಂಬ ಕಥೆ ಇಲ್ಲಿ ಸಾಂದರ್ಭಿಕವಾಗಿ ಪ್ರಸ್ತುತವಾಗಿದೆ. ಒಮ್ಮೆ ಒಬ್ಬ ಕುರೂಪಿಯಾದ ದಪ್ಪ ಹೊಟ್ಟೆಯ ಕುಳ್ಳ ಯಕ್ಷನು ದೇವೇಂದ್ರನಾದ ಶಕ್ರನ ಆಸನದಲ್ಲಿ ಹೋಗಿ ಕುಳಿತುಬಿಡುತ್ತಾನೆ. ಆಗ ದೇವತೆಗಳು 'ಆಹಾ ಇದೇನಾಶ್ಚರ್ಯ! ಈ ಕುರೂಪಿಯಾದ ಯಕ್ಷ ದೇವೇಂದ್ರನ ಆಸನದಲ್ಲಿ ಕುಳಿತಿರುವನಲ್ಲ' ಎಂದು ಸಿಟ್ಟಿಗೇಳುತ್ತಾರೆ, ಕ್ರೋಧಗೊಳ್ಳುತ್ತಾರೆ, ರೇಗುತ್ತಾರೆ. ಆಶ್ಚರ್ಯವೆಂದರೆ ಇವರು ಸಿಡುಕಿದಂತೆಲ್ಲಾ ಅವನು ಎತ್ತರಕ್ಕೆ ಬೆಳೆಯುತ್ತಾನೆ, ರೇಗಿದಂತೆಲ್ಲಾ ರೂಪವಂತನಾಗುತ್ತಾನೆ, ಹೆಚ್ಚು ದರ್ಶನೀಯನಾಗುತ್ತಾನೆ. ಆಗ ದೇವತೆಗಳು ದೇವೇಂದ್ರನಾದ ಶಕ್ರನ ಬಳಿಸಾರಿ ನಡೆದುದನ್ನೆಲ್ಲ ತಿಳಿಸುತ್ತಾರೆ. ದೇವೇಂದ್ರ ಆತ 'ಮಾರಿಷ'ನೆಂಬ ಕ್ರೋಧಭಕ್ಷ್ಯನಾದ ಯಕ್ಷನೆಂದು ತಿಳಿದು ತಾನೇ ಖುದ್ದಾಗಿ ಹೋಗಿ ಮಂಡಿಯೂರಿ ಕುಳಿತು ನಮಿಸಿ 'ನಾನು ದೇವೇಂದ್ರನಾದ ಶಕ್ರ' ಎಂದು ಮೂರು ಬಾರಿ ಹೇಳುತ್ತಾನೆ. ಅವನು ಹೇಳಿಕೊಂಡಂತೆಲ್ಲ ಯಕ್ಷ ಕುಬ್ಜನಾಗುತ್ತಾ ಹೋಗುತ್ತಾನೆ. ದಪ್ಪ ಹೊಟ್ಟೆಯ ಕುಳ್ಳನಾಗುತ್ತಾನೆ. ಕ್ರೋಧವನ್ನು ಅಕ್ರೋಧದಿಂದ ಗೆಲ್ಲಬೇಕು ಎಂಬುದೇ ಕಥೆಯ ನೀತಿ.

ಜರ್ಮನಿ ಬದಲಾಗಿದೆ. ಈಗ ಅಲ್ಲಿನ ಜನ ನಾಝಿಗಳ ಬಗ್ಗೆ ಮಾತಾಡಲು ನಾಚುತ್ತಾರೆ. ಭಾರತವು ಬದಲಾಗುತ್ತದೆ, ಒಂದು ದಿನ ಜಾತಿ, ಅಸ್ಪೃಶ್ಯತೆಯನ್ನು ಕುರಿತು ಮಾತಾಡಲು ನಾಚುತ್ತದೆ ಎಂಬುದನ್ನು ನಿರೀಕ್ಷಿಸೋಣವೆ?

■ ಮೂಚಿ

## ಮಾತೇ ಮುತ್ತು

★ ಬದುಕಿನಲ್ಲಿ ಭಯ ಪಡುವಂತಹದ್ದು ಏನೂ ಇಲ್ಲ; ಅವೆಲ್ಲವೂ ತಿಳಿದುಕೊಳ್ಳುವಂತಹದ್ದು.
-ಮೇರಿ ಕ್ಯೂರಿ

★ ಸಾಮಾನ್ಯರಂತೆ ಕಾಣುವವರೇ ಶ್ರೇಷ್ಠ ಮನುಷ್ಯರು. ಅದಕ್ಕೆಂದೇ ದೇವರು ಅತ್ಯಂತ ಹೆಚ್ಚು ಜನರನ್ನು ಸಾಮಾನ್ಯರಂತೆ ಸೃಷ್ಟಿಸಿದ್ದಾನೆ.
-ಅಬ್ರಹಾಂ ಲಿಂಕನ್

★ ಭಯವನ್ನು ಅರ್ಥ ಮಾಡಿಕೊಳ್ಳಿ; ಅದರಿಂದ ತಪ್ಪಿಸಿಕೊಳ್ಳುವುದರ ಬಗ್ಗೆ ಆಲೋಚಿಸಬೇಡಿ.
-ಜಿಡ್ಡು ಕೃಷ್ಣಮೂರ್ತಿ

★ ಮೂರು ವಸ್ತುಗಳನ್ನು ಹೆಚ್ಚು ಕಾಲ ಅಡಗಿಸಿಡಲು ಆಗುವುದಿಲ್ಲ. ಸೂರ್ಯ, ಚಂದ್ರ ಮತ್ತು ಸತ್ಯ.
-ಗೌತಮ ಬುದ್ಧ

★ ಜೀವನ ಎಂದರೆ ಶೇಕಡಾ 10ರಷ್ಟು ನಡೆಯುವ ಘಟನೆಗಳು. ಅದಕ್ಕೆ ನೀವು ಹೇಗೆ ಪ್ರತಿಕ್ರಿಯೆ ನೀಡುತ್ತೀರಿ ಎನ್ನುವುದು ಉಳಿದ ಶೇಕಡಾ 90ರಷ್ಟು.
-ಲೋ ಹಾಟ್ಜ್

★ ಹಡಗು ಬಂದರಿನೊಳಕ್ಕೆ ಬರದಿದ್ದರೆ ನೀವೇ ಈಜಿಕೊಂಡು ಹೋಗಿ ಹತ್ತಿಕೊಳ್ಳಿ.
-ಜೊನಾಥನ್ ವಿಂಟರ್ಸ್

★ ಗುರಿ ಎತ್ತರವಾಗಿಟ್ಟುಕೊಂಡು ಅದನ್ನು ಸಾಧಿಸಲಾಗದೇ ಇರುವುದು ಅಪಾಯಕರ ಅಲ್ಲ; ಗುರಿಯನ್ನು ಅತ್ಯಂತ ತಗ್ಗಿನಲ್ಲಿಟ್ಟು ಅದನ್ನು ಸಾಧಿಸುವುದೇ ಅಪಾಯಕರ.
-ಮೈಕೆಲೇಂಜಲೊ

★ ನಮ್ಮನ್ನು ನಾವೇ ಸುಧಾರಿಸಿಕೊಂಡರೆ, ಸಮಾಜ ತನ್ನಿಂದ ತಾನೇ ಸುಧಾರಣೆಯಾಗುತ್ತದೆ.
-ರಮಣ ಮಹರ್ಷಿ

★ ಯಶಸ್ಸು ಪಡೆಯಬೇಕೆಂದರೆ ಕೆಲಸದಲ್ಲಿ ಹೃದಯ ತೊಡಗಿಸಬೇಕು; ಹೃದಯದಲ್ಲಿ ಕೆಲಸದ ಧ್ಯಾನವಿರಬೇಕು.
-ಥಾಮಸ್ ವಾಟ್ಸನ್

★ ಮುಕ್ತ ಸಮಾಜವೊಂದು ಬಹು ಸಂಖ್ಯೆಯಲ್ಲಿರುವ ಬಡವರಿಗೆ ನೆರವಾಗದಿದ್ದರೆ, ಅಲ್ಲಿ ಅಲ್ಪಸಂಖ್ಯೆಯಲ್ಲಿರುವ ಶ್ರೀಮಂತರನ್ನು ಉಳಿಸಿಕೊಳ್ಳಲು ಆಗುವುದಿಲ್ಲ.
-ಜಾನ್ ಎಫ್ ಕೆನೆಡಿ